## ಒಡ್ಯಾಡಾಕಿ ಗಂಡ

ಚಿಕ್ಕಮ್ಮನ ಮಗನ ಮದುವೆಗೆ ನನ್ನಾಕೆ ವಾರದ ಮುಂಚೆಯೇ ಹೋಗಿದ್ದಳು. ಅವರಿಗೆ ಹೆಣ್ಣು ಮಕ್ಕಳು ಇಲ್ಲದಿದ್ದರಿಂದ ಅವಳನ್ನೇ ಎಲ್ಲಾ ಕಾರಣಕ್ಕೂ ಮುಂದೆ ಬಿಟ್ಟಿದ್ದರು. ಮದುವೆಯ ದಿನ ನಾನೂ ಹೋದೆ. ಅಲ್ಲಿ ನನ್ನ ಪರಿಚಿತರೊಬ್ಬರು ತಮ್ಮ ಪಕ್ಕದಲ್ಲಿ ಕುಳಿತಿದ್ದವರಿಗೆ 'ಮದುವೆಯಲ್ಲಿ ಓಡಾಡ್ತಾಳಲ್ಲ ಆಕೆಯ ಗಂಡ ಇವರು' ಎಂದು ಪರಿಚಯಿಸಿದರು. 'ಹೌದಾ' ಎಂದ ಅವರು ನನ್ನೊಂದಿಗೆ ಕುಶಲೋಪರಿ ಮಾತನಾಡುತ್ತಿರುವಾಗ ಅವರ ಹೆಂಡತಿ ಅಲ್ಲಿಗೆ ಬಂದರು. ಅವರು ಹೆಂಡತಿಗೆ 'ಅಲ್ಲಿ ಓಡಾಡ್ತಾಳಲ್ಲ ಅವರ ಗಂಡ ಇವರು' ಎಂದರು. ಅವರು ತಮ್ಮ ಸ್ನೇಹಿತೆಗೆ 'ಮದುವೆಯಲ್ಲಿ ಓಡಾಡ್ತಾರಲ್ಲ ಆಕಿಯ ಗಂಡ ಇವರು' ಎಂದರು. ನನ್ನದಾಗಲಿ, ನನ್ನ ಹೆಂಡತಿಯ ಹೆಸರಾಗಲಿ ಯಾರಿಗೂ ಬೇಕೇ ಆಗಿರಲಿಲ್ಲವೇನೊ. ಅಲ್ಲಿಯೇ ನಿಂತರೆ ಎಲ್ಲರೂ 'ಒಡ್ಯಾಡಾಕಿ ಗಂಡ' ಅಂತ ಹೇಳ್ತಾ ಹೋಗ್ತಾರೇನೋ



ಎಂದು ಆಲೋಚಿಸಿ ಅಲ್ಲಿಂದ ಜಾಗ ಬದಲಿಸಿದೆ. ಮನೆಗೆ ಬಂದ ಮೇಲೆ ನನ್ನವಳಿಗೆ ಈ ವಿಷಯ ತಿಳಿಸಿದೆ. ಈಗ ಅವಳೂ ಕೆಲವೊಂದು ಬಾರಿ 'ಒಡ್ಯಾಡಾಕಿ ಗಂಡ' ಎಂದು ರೇಗಿಸುತ್ತಾಳೆ.

**ಭೋಜರಾಜ ಸೊಪ್ಪಿಮಠ**



## ಜವಾನ

ವಾರಾಣಸಿಯಲ್ಲಿನ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಸತಿ ಸಮುಚ್ಚಯದಲ್ಲಿ ವಾಸಿಸುತ್ತಿದಾಗಿನ ಅನುಭವ. ಮಗ ಆಗ ತಾನೆ ಪಿಯೂಸಿ ಮುಗಿಸಿ ಎಂಜಿನಿಯರಿಂಗ್ ಸೇರಿದ್ದ. ಅವನ ಬೆಳವಣಿಗೆಯನ್ನು ಕಂಡ ಮನೆಯಲ್ಲಿ ಕೆಲಸ ಮಾಡುವ ಹೆಂಗಸು ಹಿಂದಿ ಭಾಷೆಯಲ್ಲಿ ನನ್ನ ಶ್ರೀಮತಿ ಎದುರು, 'ನಿಮ್ಮ ಮಗ ಜವಾನ್ ಆಗಿದಾನೆ ಅಲ್ವಾ?' ಎಂದಿದ್ದಾಳೆ. ಹಿಂದಿ ಭಾಷೆ ಗೊತ್ತೇ ಇಲ್ಲದ ನನ್ನ ಪತ್ನಿಗೆ ಪಿತ್ತ ನೆತ್ತಿಗೇರಿದೆ. ನಾನು ಮನೆಗೆ ಬಂದಾಗ ಪತ್ನಿ ಉರಿಯುತ್ತಲೇ ನನಗೆ ವಿಷಯ ತಿಳಿಸಿದಳು. 'ನೋಡ್ರಿ, ನಮ್ ಮಗನ್ನ ಅವಳು ಜವಾನ ಅಂದಳು' ಎಂದು. ನಾನು ಹುಸಿನಕ್ಕು ಹಿಂದಿ ಭಾಷೆಯಲ್ಲಿ 'ಜವಾನ್' ಅಂದರೆ 'ಯುವಕ' ಎಂದು ವಿವರಿಸಿದ ಮೇಲೆ, ಅವಳ ಕೋಪ ತಣ್ಣಗಾಗಿ ನಗೆ ಮೂಡಿತು.

**ಟಿ.ಎಲ್. ರಾಮಕೃಷ್ಣ**